**ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ನ್ಯಾಯಾಲಯ, ಕನಕಪುರ .**

ಸಿಸಿಃ **453/2008**

ಸಿಡಬ್ಲೂಃ **18**

ಪಿಡಬ್ಲ್ಯೂ ಃ**6**

ಹೆಸರು : ಕೆ ವಿಜಯ್ ಕುಮಾರ್

ತಂದೆ ಹೆಸರು : ಜಿ. ಎಂ ಕೃಷ್ಣಪ್ಪ

ವಯಸ್ಸು : **64** ವರ್ಷ

ಉದ್ಯೋಗ : ನಿವೃತ್ತ ಎ ಸಿ ಎಫ್

ವಾಸ : ಬೆಂಗಳೂರು

ದಿನಾಂಕಃ**-04.04.2026** ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ದಂಡ ಪ್ರಕ್ರಿಯಾ ಸಂಹಿತೆ 299 ರಡಿಯಲ್ಲಿ ಮುಖ್ಯ ವಿಚಾರಣೆ ಎಪಿಪಿ ಅವರಿಂದ**

**ನಾನು 25.10.2007 ರಿಂದ 12.08.2009 ರವರೆಗೂ ವಲಯ ಅರಣ್ಯಾಧಿಕಾರಿ ಸಾತನೂರು ವಲಯದಲ್ಲಿ ನನ್ನ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.**

ನಾನು ಆರೋಪಿಯನ್ನು ನೋಡಿರುವುದಿಲ್ಲ. ಚಾಸಾ**-1** ರಿಂದ **17** ರವರು ಗೊತ್ತಿರುತ್ತಾರೆ.

ಪ್ರಸ್ತುತ ಪ್ರಕರಣದಲ್ಲಿ ನಾನು ವಿಚಾರಣಾ ವರದಿ ಹಾಗೂ ಅಂತಿಮ ದೋಷಾರೋಪಣೆ ಪಟ್ಟಿಯನ್ನು ತಯಾರು ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಪ್ರಸ್ತುತ ಪ್ರಕರಣದಲ್ಲಿ ಆರೋಪಿಯ ವಿರುದ್ಧ ಸಾಕಷ್ಟು ಸಾಕ್ಷ್ಯಧಾರಗಳು ಇದ್ದ ಕಾರಣ ಕಡತದಲ್ಲಿರುವ ದಾಖಲಾತಿಗಳನ್ನು ಪರಿಶೀಲನೆ ಮಾಡಿ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಗೆ ಪ್ರಸ್ತುತ ಪ್ರಕರಣದ ವಿಚಾರಣಾ ವರದಿಯನ್ನು ತೋರಿಸಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ಕಡತದಲ್ಲಿ ಅದರ ಪ್ರತಿಯನ್ನು ಮಾತ್ರ ಹಾಜರು ಪಡಿಸಿರುವ ಕಾರಣ ಅದನ್ನು ನಿಶಾನೆಯನ್ನಾಗಿ ಗುರುತಿಸಿರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಮೊದಲನೇ ಅಪರ ಸಿಜೆ ಮತ್ತು ಜೆಎಂಎಫ್‌ಸಿ,

ಕನಕಪುರ .